## Andolana

Date: 01-04-2022 | Page No: 12

Edition: Mysore | Language: Kannada


# ಎಸ್‌ಡಿಎಂಐಎಂಡಿಯ 27ನೇ ಘಟಿಕೋತ್ಸವ



ಮೈಸೂರು: ಚಾಮುಂಡಿ ಬೆಟ್ಟದ ತಪ್ಪಲಿ ನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್ ಮೆಂಟ್ ಕಾಲೇಜಿನಲ್ಲಿ ಗುರುವಾರ ನಡೆದ 27ನೇ ವಾರ್ಷಿಕ ಘಟಿಕೋತ್ಸವದಲ್ಲಿ 2020-2022ನೇ ಬ್ಯಾಚ್‌ನ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಮ್ಯಾನೇಜ್ಮೆಂಟ್‌ನ 177 ಅರ್ಹ ವಿದ್ಯಾರ್ಥಿಗಳಿಗೆ ಎಸ್‌ಡಿಎಂಐಎಂಡಿನ ಅಧ್ಯಕ್ಷರಾದ ಡಾ.ಡಿ. ವಿರೇಂದ್ರ ಹೆಗ್ಗಡೆ ಪದವಿ ಪ್ರದಾನ ಮಾಡಿದರು.

ಕಾಮನ್ ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ (ಇಂಡಿಯಾ) ಆಡಳಿತದ ನಿರ್ದೇಶಕರಾದ ಪಂಕಜಮ್ ಶ್ರೀದೇವಿ ಅವರು ಚಿನ್ನದ ಪದಕಗಳನ್ನು ಪ್ರದಾನ ಮಾಡಿದರು.

ಅಧ್ಯಕ್ಷತೆವಹಿಸಿದ್ದಡಾ.ಡಿ.ವಿರೇಂದ್ರ ಹೆಗ್ಗಡೆ ಅವರು ಮಾತನಾಡಿ, ವಿದ್ಯಾರ್ಥಿಗಳು ಭಾರತೀಯ ನೀತಿ, ಸಾಮಾಜಿಕ ಜವಾಬ್ದಾರಿ ಮತ್ತು ಮೌಲ್ಯಗಳ ತಿಳಿವಳಿಕೆಗೆ ವಿಶೇಷ ಪ್ರಾಮುಖ್ಯತೆಯನ್ನು ನೀಡಬೇಕು. ಪ್ರಸ್ತುತ ರಾಷ್ಟ್ರೀಯ ಶೈಕ್ಷಣಿಕ ನೀತಿಯು ಉನ್ನತ ಶಿಕ್ಷಣದ ಭಾಗವಾಗಿ ಈ ಸಾಮಾಜಿಕ ಮೌಲ್ಯಗಳನ್ನು ಚರ್ಚಿಸುವ ಮೊದಲು, ನಮ್ಮ ಎಲ್ಲ ಸಂಸ್ಥೆಗಳಲ್ಲೂ ಅನುಸರಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ.ಎಂ.ವಿ ಸುನಿಲ್, ಉಪ ನಿರ್ದೇಶಕ ಡಾ.ಎಸ್. ಎನ್.ಪ್ರಸಾದ್, ಡಾ.ಪ್ರಸನ್ನ ಚಂದ್ರ, ಡಾ.ರಾಜ್ ಅಗರ್‌ವಾಲ್, ನಾಗರಾಜ್ ಇಜಾರಿ, ಡಾ.ಸುರೇಂದ್ರ ಕುಮಾರ್, ಸಂಸ್ಥೆಯ ನಿರ್ದೇಶಕರಾದ ಡಾ.ಎನ್.ಆರ್.ಪರಶುರಾಮನ್, ಕಮಲ್ ಬಾಲಿ, ವಿಜು ಪರಮೇಶ್ವರ, ನಿಶಿತ್ ಜೈನ್, ಡಾ.ಭೀಮರಾಯ ಮೇತ್ರಿ, ಡಾ.ಇಂದಿರಾ, ಪವನ್ ಜಿ. ರಂಗ ಮತ್ತಿತರರು ಹಾಜರಿದ್ದರು.